**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**Spl.C.NDPS.8/2021**

| | | |
|---|---|---|
| ಸಾಕ್ಷಿದಾರರ ಹೆಸರು | : | ಪ್ರಶಾಂತ ಕೆ. ಜಿ. |
| ತಂದೆಯ ಹೆಸರು | : | ಜಯರಾಜ ಕೆ. ಎ. |
| ವಯಸ್ಸು | : | 37 ವರ್ಷ |
| ಉದ್ಯೋಗ | : | ಸಹಾಯಕ ಇಂಜಿನಿಯರ್, PWD ದಾವಣಗೆರೆ |
| ವಾಸ ಸ್ಥಳ | : | ದಾವಣಗೆರೆ |

ಪಿ.ಡಬ್ಲ್ಯೂ 7

ಸಿ.ಡಬ್ಲ್ಯೂ 12

ದಿ: 27-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ನಾನು ಕಳೆದ 05 ವರ್ಷಗಳಿಂದ ದಾವಣಗೆರೆಯ PWD ಇಲಾಖೆಯಲ್ಲಿ ಸಹಾಯಕ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದೇನೆ. ಈ ಪ್ರಕರಣದಲ್ಲಿ ಚಾಸಾ-13 ರವರು ದಿಃ 05-04-2021 ರಂದು NDPS CEN ಪೊಲೀಸ್ ಠಾಣೆಯ ಗುನ್ನೆ ನಂಬರ 20/2021 ರ ಕೃತ್ಯ ನಡೆದ ಸ್ಥಳದ ನಕಾಶೆಯನ್ನು ತಯಾರಿಸಿ ಕೊಡಲು ಮನವಿ ಪತ್ರವನ್ನು ಕೊಟ್ಟಿದ್ದರು. ಆ ಮನವಿ ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-32 ಅಂತ ಗುರುತಿಸುತ್ತೇನೆ. ನಿಪಿ-32 ನ್ನು ಸ್ವೀಕರಿಸಿದ ಬಗ್ಗೆ ಅದರಲ್ಲಿ ನಮ್ಮ ಇಲಾಖೆಯ ಸೀಲ್ ಇರುತ್ತದೆ. ಆ ಪ್ರಕಾರ ನಾನು ದಿಃ 09-04-2021 ರಂದು CEN ಪೊಲೀಸ್ ಠಾಣೆಯ ಸಿಬ್ಬಂದಿಯಾದ ಚಾಸಾ-10 ರವರೊಂದಿಗೆ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ನಕಾಶೆಯನ್ನು ತಯಾರಿಸಿರುತ್ತೇನೆ. ದಿಃ 12-04-2021 ರಂದು ನಕಾಶೆಯನ್ನು CEN ಪೊಲೀಸ್ ಠಾಣೆಗೆ

ಕಳುಹಿಸಿರುತ್ತೇನೆ. ಸ್ಥಳದ ನಕಾಶೆಯನ್ನು ಈಗ ನೋಡಿ ಅದರಲ್ಲಿರುವ ನನ್ನ ಸಹಿ ಗುರುತಿಸುತ್ತೇನೆ. ಆ ನಕಾಶೆಯನ್ನು ನಿಪಿ-33 ಅಂತ, ಸಾಕ್ಷಿಯ ಸಹಿಯನ್ನು ನಿಪಿ-33(ಎ) ಅಂತ ಗುರುತಿಸಲಾಯಿತು. ಅದೇ ರೀತಿ ನಕಾಶೆಯನ್ನು ನಮ್ಮ ಇಲಾಖೆಯಿಂದ ತನಿಖಾಧಿಕಾರಿಗಳಿಗೆ ಕವಚ ಪತ್ರದೊಂದಿಗೆ ಸಲ್ಲಿಸಿದ್ದು, ಕವಚ ಪತ್ರವನ್ನು ನಿಪಿ-34 ಅಂತ ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಕೆ.ಕೆ.(ಎಲ್.ಎ.ಡಿ.ಸಿ.) ವಕೀಲರಿಂದ ಆರೋಪಿತರ ಪರವಾಗಿ**:

2. ಈಗ ನನಗೆ ತೋರಿಸಿದ ನಿಪಿ-23 ಮತ್ತು 33 ನಕಾಶೆ ಬೇರೆ ಬೇರೆ ಇರುತ್ತವೆ ಅಂದರೆ ನಿಜ. ಈಗ ನನಗೆ ತೋರಿಸಿದ ನಿಪಿ-23 ರಲ್ಲಿ NH 47 ಅಂತ ಇಲ್ಲ. ನಿಪಿ-23 ರಲ್ಲಿ ರಸ್ತೆ ನೇರವಾಗಿ ಇರುತ್ತವೆ ಮತ್ತು ನಿಪಿ-33 ರಲ್ಲಿ ರಸ್ತೆ ತಿರುವಾಗಿ ರಸ್ತೆ ಇರುತ್ತದೆ ಅಂದರೆ ನಿಜ. ಗಣೇಶ ದೇವಸ್ಥಾನವನ್ನು ನಿಪಿ-23 ರಲ್ಲಿ ತೋರಿಸಿಲ್ಲ ಅಂದರೆ ನಿಜ. ನಿಪಿ-23 ರಲ್ಲಿ ರಸ್ತೆಯ ಭುಜಗಳು ಇಲ್ಲ ಅಂದರೆ ನಿಜ. ನಿಪಿ-23 ರಲ್ಲಿ ದಾವಣಗೆರೆಗೆ ಹೋಗುವ ರಸ್ತೆ ತೋರಿಸಿಲ್ಲ ಅಂದರೆ ನಿಜ. ನಿಪಿ-23 ರಲ್ಲಿ ತೋರಿಸಿಲ್ಲ ಅಂದರೆ ನಿಜ. ನಾವು ಸ್ಥಳಕ್ಕೆ ಹೋಗಿಲ್ಲ ಕಛೇರಿಯಲ್ಲಿ ಕುಳಿತು ನಕಾಶೆ ತಯಾರಿಸಿ ಕೊಟ್ಟಿದ್ದೇನೆ ಅಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

3. ಸಾಮಾನ್ಯ ವ್ಯಕ್ತಿ ತಯಾರಿಸಿದ ನಕಾಶೆಗೂ ಮತ್ತು ಇಂಜಿನಿಯರ್ ನಕಾಶೆಗೂ ವ್ಯತ್ಯಾಸ ಇರುತ್ತದೆ ಅಂದರೆ ನಿಜ.

**ಮರು ಪಾಟೀ ಸವಾಲುಃ ಶ್ರೀ ಕೆ.ಕೆ.(ಎಲ್.ಎ.ಡಿ.ಸಿ.) ವಕೀಲರಿಂದ ಆರೋಪಿತರ ಪರವಾಗಿ**:

4. ಸರ್ಕಲ್ ಇನ್ಸಪೆಕ್ಟರ್ ಸಾಮಾನ್ಯ ವ್ಯಕ್ತಿ ಅಲ್ಲ ಅಂದರೆ ಅವರಿಗೆ ನಕಾಶೆಯನ್ನು ತಯಾರಿಸುವ ಅರಿವು ಇರುತ್ತದೆ. ಪೊಲೀಸರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.